ಎಲ್ಲರ ಕ್ರಿಯೆ ಮಾಡಲಿಕ್ಕೂ – ಇವನೊಬ್ಬನೇ ಇರೋದು... ಎಲ್ಲ ಪಿತೃಗಳೂ ಇವನು ಕಾಗೆಗಿಡೋ ಒಂದು ಪಿಡಿಚೆ ಅನ್ನಕ್ಕಾಗಿ ಕಾಯುತಿರುತಾರಲ್ಲವಾ? ಇವನಿಗೆಲ್ಲಿ ಅರ್ಥವಾಗುತ್ತೆ?' ಎಂದು ಹೇಳಿ, ತನ್ನಷ್ಟಕ್ಕೇ ಮತ್ತೊಮ್ಮೆ ಲೊಚಗುಟ್ಟಿಕೊಂಡಳು. ಬಲು ಅಜೀಬನ್ನಿಸಿತು. ಗಂಡು ಹುಟ್ಟುವುದೇ ಪಿತೃಗಳಿಗೆ ಪಿಂಡವಿಡಲಿಕ್ಕೆನ್ನುವ ಸಂಗತಿಯು – ನನ್ನನ್ನು ಯಾವೊತ್ತೂ ಕಾಡಿರುವುದು ಹೌದು! ಯಾರಲ್ಲಿ ಹೇಳಿಕೊಳ್ಳುವುದು? ಸುಮ್ಮನೆ – ನನಗೂ ಅಮ್ಮ ಹೇಳಿದ ಸಂಗತಿಗೂ ಸಂಬಂಧವೇ ಇಲ್ಲವೆನ್ನುವ ಹಾಗೆ ಉಳಿದೆ.

'ಮೂರನೇಯೋರು ಅಂದಿರಲ್ಲ, ಅತ್ತೆ, ಅವರನ್ನ ಇವರು ನೋಡಿದ್ದಾರಾ?' ಕುಂದಗೌರಿ, ಇದ್ದಕ್ಕಿದ್ದಂತೆ ಕೇಳಿದಳು. ಅಂದರೆ, ನಾನು ನನ್ನ ಎರಡನೇ ಚಿಕ್ಕಪ್ಪನನ್ನು ನೋಡಿದ್ದೇನೆಯೇ – ಎಂಬ ಅರ್ಥದಲ್ಲಿ ವಿಚಾರಿಸಿದಳು.

'ನಾನೇ ನೋಡಿಲ್ಲ ಅಂದಮೇಲೆ ಇವನೆಲ್ಲಿ ನೋಡಿರುತಾನೆ? ನನ್ನ ಮದುವೆಗೆ ಮುಂಚೇನೇ ಆತ ಮನೆ ಬಿಟ್ಟಿದ್ದಂತೆ... ರಾಮಕೃಷ್ಣಾಶ್ರಮ ಸೇರುತೀನಿ ಅಂತ ಹೋಗಿದ್ದು, ವಾಪಸು ಬರಲೇ ಇಲ್ಲವಂತೆ ಆಮೇಲೆ ಏನು – ಎತ್ತ ಅಂತ ಯಾರಿಗೂ ಗೊತ್ತೇ ಆಗಲಿಲ್ಲ...' ಅಮ್ಮ ಹೀಗೆ ಹೇಳಿ ತನಗೆ ತಾನೇ ನಿಡುಸುಯ್ದುಕೊಂಡಳು.

'ಅಮ್ಮ... ನನಗೆ ಲೇಟಾಗುತಿದೆ...' ಮೂವರ ನಡುವಿನ ಹತ್ತೆಂಟು ಮಿನಿಟುಗಳ ಆಡುಪಾಡನ್ನು ತುಂಡರಿಸುವ ಹಾಗೆ, ನಾನು ಹೇಳಿದೆ. ಬಲು ರೇಜಿಗೆಯಿಂದಲೇ ಹೇಳಿದೆ. 'ಇದನ್ನೇ ಅರ್ಧ ದಿವಸ ಕೂತುಕೊಂಡು ಮಾಡೋಕಾಗಲ್ಲ...'

'ಎರಡೇ ಎರಡು ನಿಮಿಷ ಕಣ್ರೀ, ಪ್ಲೀಸ್... ಇನ್ನೇನು ಕುಕ್ಕರ್ ಕೂಗಿಬಿಡುತ್ತೆ' ಕುಂದಗೌರಿ ನೈವೇದ್ಯಕ್ಕೆ ಅಣಿಗೊಳಿಸುವ ನಡುವೆ ಹೇಳಿದಳು.

ಅಸಲಿನಲ್ಲಿ, ಇಷ್ಟೆಲ್ಲ ಮಾತುಕತೆ ಜರುಗಿದ್ದು, ಇನ್ನೂ ಕುಂದಗೌರಿಯ ಅಡುಗೆ ಮುಗಿದಿಲ್ಲವೆನ್ನುವ ಕಾರಣಕ್ಕೆ. ಇನ್ನು, ಈ ಪುರೋಹಿತನೋ – ಮೊದಲೇ ನಿಧಾನಸ್ಥ. ಸಾಲದುದಕ್ಕೆ, ಕುಂದಗೌರಿಗೆ ಅವಳ ಅಮ್ಮನ ಕಡೆಯಿಂದ ನೆಂಟಸ್ಥನಾದ್ದರಿಂದ – ಈವಾಗಲಂತೂ, ಇನ್ನಷ್ಟು ಸಾವಕಾಶವಾಗಿಯೇ ಇದ್ದ. ಕುಳಿತಲ್ಲೇ ಪಟ್ಟಾಂಗಕ್ಕಿಳಿದು, ಬೇರೆ ಕೆಲಸವೇ ಇಲ್ಲವೆನ್ನುವ ಹಾಗೆ – ಈ ಹಾಳುಮೂಳು ಸಂಗತಿಯಲ್ಲಿ ತನ್ನ ಮನಸ್ಸು – ವಿಚಾರ ತುರುಕಿಕೊಂಡಿದ್ದ. ಅವನ ಮಡದಿಯು ಮೂರನೇ ಹೆರಿಗೆಯ ಸಲುವಾಗಿ ತವರಿನಲ್ಲಿದ್ದಾಳೆಂಬ ಮೇರೆಗೆ – ನನ್ನೀ ಮಡದಿಯಾದರೂ, ಇಲ್ಲಿಯೇ ಉಂಡು ಹೋಗುವಂತೆ ಪುಸಲಾಯಿಸಿದ್ದಳು. 'ನಿಮಗೆ ಅಂತಲೇ ಬೇರೆ ಅಡುಗೆ ಮಾಡಿರುತೀನಿ, ಭಟ್ಟರೇ...' ಎಂದು ಹೇಳಿ, ಪಿತೃಗಳ ನೈವೇದ್ಯವನ್ನಲ್ಲದೆ – ಅವನಿಗೆಂದೇ ಸೆಪರೇಟಾಗಿ ಅನ್ನ – ಸಾರು, ಗೊಜ್ಜು –ಪಲ್ಯಗಳನ್ನು ಬೇಯಿಸುವ ಹವಣಿನಲ್ಲಿದ್ದಳು. ಥೇಟು ದೇವರಿಗೊಂದು, ದಿಂಡರಿಗೊಂದು ಅನ್ನುವ ಹಾಗೆ!

'ಲೇಟಾಗುತಿದೆ, ಕುಂದ...' ನಾನು ಮುಸುಡಿ ಹಿಂಡುವಾಗ, 'ಒಂದು ಕೆಲಸ ಮಾಡಿ... ಹೇಗಿದ್ದರೂ ತರ್ಪಣದ ಕೆಲಸ ಆಯಿತಲ್ಲ, ಬೇಕಿದ್ದರೆ ಆಕೆ ಜೊತೆ ಮಾತಾಡಿಕೊಂಡು ಬನ್ನಿ... ಅಷ್ಟರಲ್ಲಿ ಅಡುಗೆ ಮುಗಿಯುತ್ತೆ...' ಎಂದು ಹೇಳಿದ ನನ್ನಾಕೆ, ಬದಿಯಲ್ಲಿದ್ದ ಫೋನನ್ನು ನನ್ನ ಕಡೆ ನೂಕಿ – ಬಳಸಬಹುದೆಂಬ ಪರವಾನಗಿಯನ್ನಿತ್ತು ಅಡುಗೆಮನೆಯತ್ತ ಸರಿದಳು.

ಎಲಾ ಎಲಾ ಅಂದುಕೊಂಡೆ. ಅನುಕೂಲಕ್ಕೆ ತಕ್ಕಂತೆ ನಿಯಮ ಬದಲಿಸುವ ಪರಿಗೆ ಆಶ್ಚರ್ಯಪಟ್ಟೆ!

ತಕ್ಷಣ ಫೋನು ಹೆಕ್ಕಿಕೊಂಡು – ಶರ್ಲೀನ್ ವರ್ಕಿಯ ಮೆಸೇಜುಗಳನ್ನು ಕಣ್ಣಾರೆ ನೋಡಿ ಓದಿಕೊಂಡೆ.

'ಅರ್ಧ ಗಂಟೆ ತಡೆದು ಮಾಡುತೀನಿ – ಅಂತ ಕಳಿಸು...' ಎಂದು ನಾನು ಹೇಳಿದ್ದನ್ನು, ಈ ನನ್ನ ಹೆಂಡತಿ – ಅದನ್ನು ತನ್ನ ನೇರಕ್ಕೆ ರೂಪಾಂತರಿಸಿಕೊಂಡು, 'ಮಧ್ಯಾಹ್ನ ಊಟ ಆದಮೇಲೆ ಮಾಡುತೀನಿ...' ಎಂದು ತಿದ್ದಿ ಕಳಿಸಿದ್ದಳು!